# 17. ಸ.ಕಿ.ಪ್ರಾ.ಶಾಲೆ ಹಡ್ಲ ಬೈಲು

ಹೊಸನಗರ ತಾಲೂಕಿನ ಸ.ಕಿ.ಪ್ರಾ.ಶಾಲೆ ಹಡ್ಲ ಬೈಲು ಇಲ್ಲಿ 16 ಮಕ್ಕಳು ಮತ್ತು ಒಬ್ಬರೇ ಶಿಕ್ಷಕರಿದ್ದರೂ ಕೂಡ ಮಾದರಿ ಶಾಲೆಯಾಗಿ ನಿರ್ಮಾಣಗೊಂಡಿದೆ 1983 ರಲ್ಲಿ ಸ್ಥಾಪನೆಯಾದ ಈ ಶಾಲೆಯು ಮಲೆನಾಡಿನ ತಪ್ಪಲಿನಲ್ಲಿದ್ದು ಪ್ರಧಾನವಾದ ಸಾಮಾಜಿಕ ಹಿನ್ನೆಲೆಯುಳ್ಳ ಸುಮಾರು 29 ಮನೆಗಳನ್ನು ಹೊಂದಿರುವ ಗ್ರಾಮದಲ್ಲಿದೆ. ಪ್ರಸ್ತುತ ಒಬ್ಬರು ಖಾಯಂ ಶಿಕ್ಷಕರು ಮತ್ತೊಬ್ಬರು ಗೌರವ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಶಾಲೆಯಲ್ಲಿ ಕೈಗೊಂಡ ನಾವೀನ್ಯಯುತ ಚಟುವಟಿಕೆಗಳೆಂದರೆ : –

1. ಉತ್ತಮವಾದ ಶಾಲಾ ಕೈತೋಟ, ಆಕರ್ಷಕ ಹಸಿರು ಸಸ್ಯಗಳು, ಔಷಧಿ ಸಸ್ಯಗಳು
2. ಕಲಿಕೆಗೆ ಸಹಾಯಕವಾದ ಮರುಭೂಮಿ, ಸೋಲಾರ, ಫಿರಂಗಿ, ಮಣ್ಣಿನ ವಿಧಗಳು, ಏತ ಬಾತ, ಗುಹೆಯ ಮಾದರಿ ಇನ್ನೂ ಇತಯಾದಿ ಪರಿಸರದ ಮಾದರಿಗಳ ತಯಾರಿಕೆ
3. ಶಾರದಾ ಮಂದಿರ, ಪ್ರವೇಶ ದ್ವಾರ, ಕಲಿಕಾ ಕುಟೀರ, ಕಲಿಕೆಗೆ ಸಹಕಾರಿಯಾದ ಮರದ ಆಸನಗಳು
4. ಮನೋರಂಜನೆ ಹಾಗೂ ಸಾಹಸ ಕ್ರೀಡೆಗಳಿಗೆ ಪರಿಕರಗಳ ವ್ಯವಸ್ಥೆ
5. ನಲಿ ಕಲಿ ಮಕ್ಕಳು ಕುಳಿತು ಕೊಳ್ಳಲು ಟೇಬಲ್ ವ್ಯವಸ್ಥೆ
6. ಅಡಿಕೆ–ತೆಂಗು ಹಾಗೂ ತರಕಾರಿ ಗಿಡಗಳ ಪೋಷಣೆ

ಪ್ರಾರಂಭದಲ್ಲಿ ಏಳು ಮಕ್ಕಳಿದ್ದು ಪೋಷಕರ ಹಾಗೂ ಸಮುದಾಯದ ಸಹಭಾಗಿತ್ವ ತೀರಾ ನಿರಾಶಾದಾಯಕವಾಗಿತ್ತು. ಆಗತಾನೇ ಕಟಾವಾದ ಅಕೇಷಿಯ ಮರಗಳು, ಶಾಲೆಯ ಸುತ್ತ ಬೇಲಿ ಇಲ್ಲದಿರುವುದು, ನೀರಿನ ವ್ಯವಸ್ಥೆಯಿಲ್ಲದಿರುವುದು ಕಂಡು ಬಂದಿತು. ಒಟ್ಟಿನಲ್ಲಿ ವಾತಾವರಣ ಕಲಕೆಗೆ ಪೂರಕವಾಗಿರಲಿಲ್ಲ.

ಇದಕ್ಕಾಗಿ ಪೋಷಕರ ಮನೆ ಮನೆ ಭೇಟಿ, ಪೋಷಕರೊಡನೆ ಸಂವಾದದ ಮೂಲಕ ಮಕ್ಕಳ ಗೈರು ಹಾಜರಿ ತಡೆಗಟ್ಟಲು ಕ್ರಮವಹಿಸಿದುದು, ಮಕ್ಕಳು ಮತ್ತು ಪೋಷಕರನ್ನು ಸೆಳೆಯಲು ಕನ್ನಡದ ಜೊತೆಗೆ ಇಂಗ್ಲೀಷ್ ಕಲಿಕೆ ಪ್ರಾರಂಭಿಸಿದುದು, ಶಾಲಾ ಆವರಣದ ಸುತ್ತ ಬೇಲಿ ನಿರ್ಮಾಣ, ನೆರೆ ಹೊರೆಯವರ ಮನವೊಲಿಸಿ ನೀರಿನ ವ್ಯವಸ್ಥೆ, ಪ್ರತಿಭಾ ಕಾರಂಜಿ ಇನ್ನಿತರ ಸ್ಪರ್ಧೆಗಳಲ್ಲಿ ಬಹುಮಾನಗಳಿಸುವ ಸಾಧನೆಯ ಮೂಲಕ ಪೋಷಕರಿಗೆ ಶಾಲೆಯ ಬಗ್ಗೆ ಅಭಿಮಾನ ಮೂಡುವಂತೆ ಮಾಡಲಾಯಿತು. ಪರಿಸರ ಮಿತ್ರ ಸ್ಪರ್ಧೆಯಲ್ಲಿ ಭಾಗವಹಿಸಿ ಪ್ರಶಸ್ತಿಗೆಲ್ಲುವ ಮೂಲಕ ಸಾರ್ವಜನಿಕರ ಗಮನ ಸೆಳೆಯಲಾಯಿತು. ಈ ಮೂಲಕ ಶಾಲೆಯ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲಾಯಿತು.

ಈ ಶಾಲೆಯಲ್ಲಿ ನಿರ್ಮಾಣಗೊಂಡಿರುವ ಶಾಲಾ ಪ್ರವೇಶ ದ್ವಾರ, ಸರಸ್ವತಿ ಮಂದಿರ, ಶಾಲಾವರಣದ ನೆಲಹಾಸು, ಮರದ ಆಸನಗಳ ವ್ಯವಸ್ಥೆ, ಕುಟೀರ, ಕೈತೋಟ ನಿರ್ಮಾಣ ಮತ್ತು ಅದರ ಕೆಲಸ, ವಾರ್ಷಿಕೋತ್ಸವಕ್ಕಾಗಿ ವಂತಿಗೆ ಹೀಗೆ ಹತ್ತಾರು ಕೆಲಸಗಳಲ್ಲಿ ನೆರವಿಗೆ ನಿಂತವರು ದಾನಿಗಳಾಗಿದ್ದಾರೆ.

2013–14 ನೇ ಸಾಲಿನಲ್ಲಿ ಹಳದಿ ಶಾಲೆ ಪ್ರಶಸ್ತಿ, 2014–15 ರಲ್ಲಿ ಪರಿಸರ ಮಿತ್ರ ಪ್ರಶಸ್ತಿ –ಹಸಿರು ಶಾಲೆ ಪ್ರಶಸ್ತಿ, 2015–16 ರಲ್ಲಿ ಪರಿಸರ ಮಿತ್ರ ಶಾಲಾ ಪ್ರಶಸ್ತಿ, 2015–16 ರಲ್ಲಿ ತಾಲೂಕು ಮಟ್ಟದ ಉತ್ತಮ ಶಾಲಾ ಪ್ರಶಸ್ತಿ, 2017–18 ರಲ್ಲಿ ತೋಟಗಾರಿಕೆ ಇಲಾಖೆಯಿಂದ ಉತ್ತಮ ಉದ್ಯಾನವನ ನಿರ್ವಹಣೆ ಪ್ರಶಸ್ತಿ ಹೀಗೆ ಪ್ರತಿ ವರ್ಷ ಪ್ರಶಸ್ತಿಗಳನ್ನು ಗಳಿಸುತ್ತಿದೆ.

ಒಟ್ಟಾರೆಯಾಗಿ ಶಿಶು ಸ್ನೇಹಿ ವಾತಾವರಣ, ಚಟುವಟಿಕೆ ಆಧಾರಿತ ಕಲಿಕಾ ಉಪಕ್ರಮಗಳಿಂದ ಶಾಲೆಯ ಸರ್ವತೋಮುಖ ಬೆಳವಣಿಗೆಯತ್ತ ದಾಪುಗಾಲಿಡುತ್ತಿದೆ. ಒಬ್ಬರೇ ಶಿಕ್ಷಕರಿದ್ದರೂ ಮಾಡುವ ಮನಸ್ಸಿದ್ದರೆ ಏನನ್ನಾದರೂ ಸಾಧಿಸಬಹುದು ಎನ್ನುವುದಕ್ಕೆ ಈ ಶಾಲೆಯೇ ಉತ್ತಮ ಉದಾಹರಣೆ.


ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ,











ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಡ್ಲುಬೈಲು ಹೊಸನಗರ ತಾ॥ ಶಿವಮೊಗ್ಗ ಜಿ॥
2015-16



